ಸಾಕ್ಷಿಯು ದಿನಾಂಕ- **22-11-2025** ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಸಾಕ್ಷಿಗೆ ಕನ್ನಡ ಭಾಷೆ ಭಾಷೆ ಬರದ ಕಾರಣ ಶ್ರೀ ಟಿ ಜೆ ವಕೀಲರನ್ನು ತರ್ಜುಮೆಗಾರರನ್ನಾಗಿ ನೇಮಿಸಿ, ಅವರಿಗೆ ಪ್ರಮಾಣ ವಚನ ಬೋಧಿಸಲಾಯಿತು. ಸದರಿಯವರು ಕನ್ನಡ ಭಾಷೆಯಿಂದ ಹಿಂದಿ ಭಾಷೆಗೆ ಸಾಕ್ಷಿಗೆ ಪ್ರಶ್ನೆಗಳನ್ನು ತರ್ಜುಮೆ ಮಾಡಿ ಅವರು ಹೇಳಿದ ಉತ್ತರವನ್ನು ಕನ್ನಡ ಭಾಷೆಗೆ ಇದ್ದಂತೆ ಅನುವಾದಿಸುತ್ತೇನೆಂದು ನುಡಿಯುತ್ತಾರೆ.

<u>ಮುಂದುವರೆದ ಪಾಟೀಸವಾಲು- ದೂರುದಾರರ ಪರ ಶ್ರೀ ಕೆ ಎಸ್ ಎಂ ವಕೀಲರಿಂದ</u> -

ಇಕ್ಬಾಲ್ ಭಾಷಾ ನನಗೆ ಸಹೋದರ ಆಗುತ್ತಾರೆ. ಸಾಕ್ಷಿಗೆ ಅವರು ಓರಿಯೆಂಟಲ್ ಬ್ಯಾಂಕ್ ಆಫ್ ಕಾಮರ್ಸ್ ನಲ್ಲಿ ಸಾಲ ಪಡೆದಿರುತ್ತಾರೆ ಎಂದು ಹೇಳಿದ್ದು, ಸದರಿ ಅರ್ಜಿಯನ್ನು ಎದುರು ತೋರಿಸಿದಾಗ ಅವರು ಅದನ್ನು ಒಪ್ಪಿರುತ್ತಾರೆ, ಹಾಗೂ ಅದರಲ್ಲಿ ತನ್ನ ಸಹಿಗಳನ್ನು ಸಹ ನೋಡಿ ಗುರುತಿಸಿರುತ್ತಾರೆ. ಆದ್ದರಿಂದ ಸದರಿ ದಾಖಲೆಯನ್ನು ನಿಪಿ-9 ಎಂದು, ಸದರಿ ಎರಡು ಸಹಿಗಳನ್ನು ಒಟ್ಟಿಗೆ ನಿಪಿ-9(ಎ) ಎಂದು ಗುರುತಿಸಲಾಯಿತು. ಸದರಿ ಸಾಲದ ಅರ್ಜಿಯ ಆಧಾರದ ಮೇಲೆ ಸದರಿ ಬ್ಯಾಂಕಿನವರು ರೂ.**18** ಲಕ್ಷ ಸಾಲವನ್ನು ವರ್ಗಾವಣೆ ಮಾಡಿದ ರಸೀದಿಯನ್ನು ಸಾಕ್ಷಿಗೆ ಎದುರು ತೋರಿಸಿದಾಗ ಅವರು ಒಪ್ಪಿರುತ್ತಾರೆ. ಆದ್ದರಿಂದ ಸದರಿ ದಾಖಲೆಯನ್ನು ನಿಪಿ-**10** ಎಂದು ಗುರುತಿಸಲಾಯಿತು. ಈ ರೀತಿ ಸಾಲ ಪಡೆದನಂತರ ನಾನು ರೆಹನಾ ಭಾಷಾರವರಿಗೆ ಬಾಕಿ ಖರೀದಿ ಮೊತ್ತವನ್ನು ಡಿಡಿ ಮುಖಾಂತರ ಪಾವತಿ ಮಾಡಿರುತ್ತೇನೆ ಎಂದರೆ ಸರಿ. ಇದಾದ ನಂತರ ದಿಃ **11.02.2016** ರಂದು ನಾನು ರಿಹನಾ ಭಾಷಾರವರಿಂದ ರೂ.**7,50,000.00** ಗಳನ್ನು ಸಾಲವನ್ನಾಗಿ ಪಡೆದಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ನಾನು ಅವರಿಂದ ಸಾಲ ಪಡೆದಿಲ್ಲ, ಅವರಿಗೆ ಆಸ್ತಿಯ ಖರೀದಿಗಾಗಿ ಮುಂಗಡ ಹಣದ ಪಾವತಿ ಮಾಡಿದ್ದೆ ಎಂದು ನುಡಿಯುತ್ತಾರೆ. ದಿಃ **11.06.2016** ರಂದು ಸದರಿ ರೆಹನಾ ಭಾಷಾರವರು ತಮ್ಮ ಐ ಎನ್ ಜಿ ವೈಶ್ಯ ಬ್ಯಾಂಕ್ ಖಾತೆಯ ಚೆಕ್ ಮುಖಾಂತರ ನನಗೆ ರೂ.**5,41,000.00** ಹಾಗೂ ರೂ.**2,09,000.00** ಹಣವನ್ನು ಸಾಲವನ್ನಾಗಿ ಕೊಟ್ಟಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ನಾನು ಅವರಿಗೆ ಆಸ್ತಿ ಖರೀದಿಗೆಂದು

ಮುಂಗಡ ಹಣದ ಪಾವತಿ ಮಾಡಿದ್ದೆ, ಅವರು ಅದನ್ನು ನನಗೆ ವಾಪಸ್ಸು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-1 ಚೆಕ ನ್ನು ನಾನು ಸದರಿ ಸಾಲದ ಮರುಪಾವತಿಗೆಂದು ರೆಹನಾ ಭಾಷಾ ರವರಿಗೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ಅದನ್ನು ಬ್ಯಾಂಕಿನಲ್ಲಿ ಸಾಲ ಪಡೆಯುವಾಗ ಕೊಟ್ಟಿದ್ದೆ ಎಂದು ನುಡಿಯುತ್ತಾರೆ. ನಿಪಿ-1 ಚೆಕ್ ನನಗೆ ಸೇರಿದ್ದು ಎಂದರೆ ಸರಿ. ಸಾಕ್ಷಿ ಮುಂದುವರೆದು, ಆದರೆ ನಾನು ಅದನ್ನು ಪಿರ್ಯಾದುದಾರಿಗೆ ಕೊಟ್ಟಿರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಚೆಕ್ ನಲ್ಲಿರುವ ಸಹಿ ನನ್ನದು ಎಂದರೆ ಸರಿಯಲ್ಲ. ನಾನು ರಿಹನಾ ಭಾಷಾರವರಿಂದ ಪಡೆದು ರೂ.7,50,000.00 ಸಾಲದ ಮರುಪಾವತಿಗೆಂದು ನಿಪಿ-1 ಚೆಕ್ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಅವರು ನ್ಯಾಯಾಲಯದ ಮುಂದೆ ನೀಡಿದ ತಮ್ಮ ಮುಖ್ಯ ವಿಚಾರಣೆ ಸಾಕ್ಷ್ಯವನ್ನು ಎದುರು ತೋರಿಸಿ ಅದರಲ್ಲಿ ಇರುವ ಸಹಿ ನಿಮ್ಮದೇ ಎಂದರೆ ಸಾಕ್ಷಿ ಅದನ್ನು ಒಪ್ಪಿರುತ್ತಾರೆ. ಸದರಿ ದಾಖಲೆಯಲ್ಲಿರುವ ಸಹಿ ಹಾಗೂ ನಿಪಿ-1 ಚೆಕ್ ನಲ್ಲಿರುವ ಸಹಿ ಎರಡು ಒಂದೇ ಎಂದರೆ ಸಾಕ್ಷಿ ಸರಿಯಲ್ಲ, ನಾನು ಚೆಕ್ ನಲ್ಲಿ ಸಹಿ ಮಾಡಿಯೇ ಇಲ್ಲ ಎಂದು ನುಡಿಯುತ್ತಾರೆ. ನನ್ನ ವಿರುದ್ಧ ಐ ಪಿ ಸಿ ಕಲಂ 420ರಡಿಯಲ್ಲಿ ದಾಖಲಾದ ಪ್ರಕರಣದ ವಿಚಾರಣೆ ನಡೆಯುತ್ತಿದೆ. ಸದರಿ ಪ್ರಕರಣದಲ್ಲಿ ನಾನು ಬ್ಯಾಂಕಿನಿಂದ ಸಾಲ ಪಡೆಯುವಾಗ ನನ್ನ ಹೆಸರಿನಲ್ಲಿ ಮನೆ ಇದೆ, ಅದನ್ನು ಆಧಾರವಾಗಿ ನೀಡಿರುತ್ತೇನೆ ಎಂದರೆ ಸಾಕ್ಷಿ ದೂರುದಾರರ ಗಂಡ ಈ ಎಲ್ಲಾ ಸಾಲದ ವಿಚಾರವನ್ನು ನೋಡಿಕೊಂಡಿರುತ್ತಾರೆ, ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಖಾಲಿ ಜಾಗವನ್ನು ಖರೀದಿ ಮಾಡಿರುತ್ತೇನೆ ಎಂದರೆ ಸಾಕ್ಷಿ ಮೆಹಬೂಬ್ ಭಾಷಾರವರು ನನಗೆ ಮನೆ ಇರುವ ಜಾಗವನ್ನು ತೋರಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಬ್ಯಾಂಕಿಗೆ ಸುಳ್ಳು ಮಾಹಿತಿ ಕೊಟ್ಟು, ಸಾಲ ಪಡೆದು ಅದರ ಹೊಣೆಯನ್ನು ದೂರುದಾರರ ಗಂಡನ ಮೇಲೆ ಹೊರೆಸುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಈ ಹಂತದಲ್ಲಿ ಮುಂದುವರೆದು, ನಾನು 7ನೇ ತರಗತಿವರೆಗೆ ಮಾತ್ರ ಓದಿರುತ್ತೇನೆ, ನನಗೆ ಕನ್ನಡ ಹಾಗೂ ಇಂಗ್ಲೀಷ್ ಭಾಷೆ ಬರುವುದಿಲ್ಲ, ದೂರುದಾರನ ಗಂಡನೇ ಆಸ್ತಿ ಮಾರಾಟ ಮಾಡುತ್ತೇನೆ ಎಂದು ಹೇಳಿ ನನಗೆ ಸಾಲ ಕೊಡಿಸಿರುತ್ತಾರೆ, ನಾನು ಬ್ಯಾಂಕಿಗೆ ಸಹಿ ಮಾಡಲು ಮಾತ್ರ ಹೋಗಿದ್ದೆ, ಬೇರೆ ಯಾವ ಸಮಯದಲ್ಲೂ ಸಹ ಹೋಗಿಲ್ಲ ಎಂದು ನುಡಿಯುತ್ತಾರೆ. ಈ ಮೇಲೆ ಹೇಳಿದ ಐ ಪಿ ಸಿ ಕಲಂ 420ಪ್ರಕರಣದಲ್ಲಿ ನನ್ನ ಅಣ್ಣನನ್ನು ಸಹ

ಸಿ. ಸಿ. ನಂ.- **328/18**

ಡಿ. ಡಬ್ಲ್ಯೂ- **1**

ಆರೋಪಿ ಸಂ.2 ಎಂದು ಮಾಡಲಾಗಿದೆ ಎಂದರೆ ಸಾಕ್ಷಿ ಅವರು ಅವರು ನನ್ನ ಅಣ್ಣ ಎಂದು, ಅವರ ಸಹಿ ಸಹ ದಾಖಲೆಗಳಲ್ಲಿ ಪಡೆಯಲಾಗಿತ್ತು, ಆದ್ದರಿಂದ ಆರೋಪಿಯನ್ನಾಗಿ ಮಾಡಲಾಗಿದೆ ಎಂದು ನುಡಿಯುತ್ತಾರೆ. ಪಿರ್ಯಾದಿದಾರರಿಂದ ಸಾಲ ಪಡೆದು ಅವರ ವಿರುದ್ಧ ಸುಳ್ಳು ದೋಷಗಳನ್ನು ಹೊರೆಸಿ, ಅವರನ್ನು ಸಹ ಈ ಮೇಲೆ ಹೇಳಿದ ಐ ಪಿ ಸಿ ಕಲಂ 420 ಪ್ರಕರಣದಲ್ಲಿ ಆರೋಪಿಗಳನ್ನಾಗಿ ಮಾಡುವಂತೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ನಾನು ಸುಳ್ಳು ಮಾಹಿತಿ ಕೊಟ್ಟು ಪಿರ್ಯಾದುದಾರರು ಹಾಗೂ ಅವರ ಗಂಡನನ್ನು ಆರೋಪಿಗಳನ್ನಾಗಿ ಮಾಡುವಂತೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಬ್ಯಾಂಕಿನಿಂದ ರೂ.18 ಲಕ್ಷ ಸಾಲ ಪಡೆದು, ಅವರಿಗೆ ಮೋಸ ಮಾಡಿರುತ್ತೇನೆ, ಅದೇ ರೀತಿ ದುಹುದಾರರಿಂದ ರೂ.7,50,000.00 ಸಾಲ ಪಡೆದು, ಅವರಿಗೂ ಸಹ ಮೋಸ ಮಾಡುತ್ತಿದ್ದೇನೆ ಎಂದರೆ ಸಾಕ್ಷಿ ಈ ಎರಡು ಸಾಲಗಳ ಬಗ್ಗೆ ಪಿರ್ಯಾದುದಾರರ ಗಂಡನೇ ನೋಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ದೂರುದಾರಿಗೆ ಪಡೆದ ಸಾಲದ ಮರುಪಾವತಿ ಮಾಡಲು ಬಾಧ್ಯಸ್ಥಳಾಗಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಸಹಿ-

1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ವಿಜಯನಗರ ಜಿಲ್ಲೆ, ಹೊಸಪೇಟೆ.

ಡಿ. ಡಬ್ಲ್ಯೂ- **1**